ಮಧ್ಯಂತರ ಅರ್ಜಿ ಸಂಖ್ಯೆ 14 ರ ಮೇಲೆ ಆದಂತಹ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕಃ 09-02-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** ಪ್ರತಿವಾದಿ 1, 2 ಮತ್ತು 4 ರವರ ಪರ ಶ್ರೀ ವಿ ಕೆ ಕೆ ವಕೀಲರಿಂದ

ನನಗೆ ವಾಸುದೇವಗೌಡರವರ ಪರಿಚಯ ಚಿಕ್ಕಂದಿನಿಂದ ಇದೆ. ವಾಸುದೇವಗೌಡರಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಇಲ್ಲ. 2 ರಿಂದ 4 ನೇ ಪ್ರತಿವಾದಿಯರು ವಾಸುದೇವಗೌಡರ ಮಕ್ಕಳು. 5 ನೇ ಪ್ರತಿವಾದಿ ವಾಸುದೇವಗೌಡರ ಖಾಸ ತಮ್ಮ. ವಾಸುದೇವಗೌಡರ ತಂದೆಯಾದ ದ್ಯಾಮನಗೌಡರಿಗೆ ಐದು ಜನ ಮಕ್ಕಳು. ಅವರ ಹೆಸರು ಮಲ್ಲಿಕಾರ್ಜುನಗೌಡ, ಶೇಖರಗೌಡ, ವಾಸುದೇವಗೌಡ, ಠಾಕನಗೌಡ ಮತ್ತು ನೀಲಕಂಠಗೌಡ. ದ್ಯಾಮನಗೌಡರ ಮಕ್ಕಳ ಆಸ್ತಿಗಳು ಮೆಳ್ಳಾಗಟ್ಟಿ ಗ್ರಾಮದಲ್ಲಿ ಇವೆ. ದ್ಯಾಮನಗೌಡರಿಗೆ ಕುಸುಮಕ್ಕ, ಮಲ್ಲಮ್ಮ ಮತ್ತು ಲಕ್ಷ್ಮವ್ವ ಎಂಬ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಚನ್ನಬಸನಗೌಡನಿಗೆ ದ್ಯಾಮನಗೌಡ ಮತ್ತು ಶಿವನಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ದ್ಯಾಮನಗೌಡ ಮತ್ತು ಶಿವನಗೌಡನ ನಡುವೆ ವಿಭಾಗ ಆಗಿರುತ್ತದೆ.

ದಾವಾ ಆಸ್ತಿಯ ಮೇಲೆ ಮೊದಲಿನಿಂದಲೂ ಕುಣಿಮೆಳ್ಳಿಹಳ್ಳಿ ವ್ಯವಸಾಯ ಸೇವಾ ಸಂಘದ ಸಾಲದ ಬೋಜಾ ಇದೆ ಎಂದರೆ ಸರಿ. ದಾವಾ ಆಸ್ತಿಯ ರಿ ಸ ಸಂಖ್ಯೆ 45/2. ರಿ ಸ ಸಂಖ್ಯೆ 45 ರ ಒಟ್ಟು ವಿಸ್ತೀರ್ಣ 10 ಎಕರೆ 25 ಗುಂಟೆ ಇತ್ತು ಎಂದರೆ

ಸರಿ. ಸಾಕ್ಷಿಯು ಸ್ವತಃ ಸದರಿ ಜಮೀನಿನಲ್ಲಿ ಭಾಗ ಆಗಿದ್ದು ಅದರ ಪೈಕಿ 5 ಎಕರೆ 15 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಾನು ಖರೀದಿ ಕರಾರುಪತ್ರ ಬರೆಸಿಕೊಂಡಿದ್ದೆನೆ ಎಂದು ನುಡಿದಿದ್ದಾರೆ. ಸದರಿ ರಿ ಸ ಸಂಖ್ಯೆ 45 ರಲ್ಲಿ ವಿಭಾಗ ಆದ ಬಗ್ಗೆ ಡ ಇದೆ. ಆ ಬಗ್ಗೆ ವಿಭಾಗದ ಕಾಗದ ಇದೆ. ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಚಕ್ಕಬಂದಿ ತೋರಿಸಲು ಖರೀದಿ ಕರಾರುಪತ್ರ ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ದಾವೆಯಲ್ಲಿ ದಾವಾ ಆಸ್ತಿಯ ಚಕ್ಕಬಂದಿಯನ್ನು ಆಸ್ತಿಯ ಉತಾರ ಹಾಗೂ ಸ್ಥಳದಲ್ಲಿ ಇರುವ ಚಕ್ಕಬಂದಿ ನೋಡಿ ಬರೆಸಿರುತ್ತೇನೆ. ದಾವಾ ಜಮೀನು ಮಸಾರಿ ಜಮೀನು. ಪ್ರತಿವಾದಿಯರಿಗೆ ಕೊಟ್ಟಂತಹ ನೋಟಿಸುಗಳಲ್ಲಿ ದಾವಾ ಆಸ್ತಿಯ ಚಕ್ಕಬಂದಿ ಬರೆಸಿಲ್ಲ ಎಂದರೆ ಸರಿ.

ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ನನಗೆ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಹೇಳಿದ್ದರು. ದಾವಾ ಆಸ್ತಿಯನ್ನು ಮಾರಾಟ ಮಾಡುವುದಾಗಿ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ 2010 ರಲ್ಲಿ ಸಂಕನಗೌಡ ಪಕ್ಕೀರಗೌಡ ದ್ಯಾಮನಗೌಡ್ರ ಮತ್ತು ಬಸವಣ್ಣೆಪ್ಪ ವೀರಪ್ಪ ಸೂರಣಗಿ ರವರನ್ನು ಕರೆದುಕೊಂಡು ಬಂದು ಹೇಳಿದ್ದರು. ಅವರು ಮೆಳ್ಳಾಗಟ್ಟಿ ಗ್ರಾಮಕ್ಕೆ ಬಂದು ಆ ವಿಷಯ ಹೇಳಿದ್ದರು. ಅವರು ನಮ್ಮ ಮನೆಗೆ ಬಂದು ಆ ವಿಷಯ ಹೇಳಿದ್ದರು ಹಾಗೂ ಆ ಸಮಯದಲ್ಲಿ ಅಕ್ಕಪಕ್ಕದವರು ಇದ್ದರು. ಸದರಿಯವರು ನಮ್ಮ ಮನೆಗೆ ಯಾವ ದಿನಾಂಕ ಮತ್ತು

ತಿಂಗಳಿನಲ್ಲಿ ಬಂದಿದ್ದರು ಎಂದು ನನಗೆ ನೆನಪಿಲ್ಲ. ಅವರು ಆ ದಿನ ನಮ್ಮ ಮನೆಗೆ ಸಂಜೆ ಸುಮಾರು 5.30 ಗಂಟೆಗೆ ಬಂದಿದ್ದರು. ಆ ದಿನ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಜಮೀನು ಮಾರಾಟ ಮಾಡುತ್ತೇವೆ ಎಂದು ಹೇಳಿದ್ದರು ಹಾಗೂ ನಾನು ಖರೀದಿಸುತ್ತೇನೆ ಎಂದು ಹೇಳಿದ್ದೆ ಆದರೆ ಆ ದಿನ ಖರೀದಿಯ ಮಾತುಕತೆ ಆಗಲಿಲ್ಲ. ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಮೆಳ್ಳಾಗಟ್ಟಿಯಲ್ಲಿರುವ ದಾವಾ ಆಸ್ತಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲ ಹಾಗಾಗಿ ಹಿರೇಬೂದಿಹಾಳ ಗ್ರಾಮದಲ್ಲಿ ಜಮೀನು ಖರೀದಿ ಮಾಡಬೇಕಾಗಿರುವುದರಿಂದ ದಾವಾ ಆಸ್ತಿಯನ್ನು ಮಾರಾಟ ಮಾಡುವುದಾಗಿ ನನಗೆ ಹೇಳಿದ್ದರು. ಸದರಿ ವಿಷಯವನ್ನು ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಕೂಡಿಯೇ ನನ್ನ ಮುಂದೆ ಹಾಗೂ ಸಾಕ್ಷಿದಾರರ ಸಮಕ್ಷಮ ಹೇಳಿದ್ದರು.

ಅವರು ಖರೀದಿ ಮಾತುಕತೆ ಮಾಡಲು ಸೋಮವಾರದಂದು ಹಿರೇಬೂದಿಹಾಳ ಗ್ರಾಮಕ್ಕೆ ಬರಲು ನನಗೆ ತಿಳಿಸಿ ಹೊರಟುಹೋದರು ಆದರೆ ಅವರು ನಮ್ಮ ಮನೆಗೆ ಬಂದ ದಿನ ಯಾವುದು ಇತ್ತು ಎಂದು ನನಗೆ ನೆನಪಿಲ್ಲ. ದಿಃ 18.01.2010 ರಂದು ಸೋಮವಾರ ಇದ್ದು ಆ ದಿನ ನಾನು ಖರೀದಿ ಮಾತುಕತೆಗೆ ಹಿರೇಬೂದಿಹಾಳ ಗ್ರಾಮಕ್ಕೆ ಹೋಗಿದ್ದೆನು. ಸದರಿ ಹಿರೇಬೂದಿಹಾಳ ಗ್ರಾಮ ಕುಂದಗೋಳ ತಾಲೂಕಿನಲ್ಲಿ ಇದೆ ಎಂದರೆ ಸರಿ. ಆ ದಿನ ನಾನು 8-10

ಜನರನ್ನು ಕರೆದುಕೊಂಡು ನಮ್ಮ ಓಮಿನಿ ವಾಹನದಲ್ಲಿ ಬೆಳಿಗ್ಗೆ ಸುಮಾರು 10 ರಿಂದ 11 ಗಂಟೆ ಸಮಯ ಹಿರೇಬೂದಿಹಾಳ ಗ್ರಾಮಕ್ಕೆ ಹೋಗಿದ್ದೆವು. ಸದರಿ 8-10 ಜನರ ಪರಿಚಯ ನನಗೆ ಇದ್ದು ಅವರ ಹೆಸರುಗಳು ಅಜ್ಜಪ್ಪ-ನನ್ನ ಮಗ, ಬಸವಣ್ಣೆಪ್ಪ ಸೂರಣಗಿ, ಸಂಕನಗೌಡ ಪಕ್ಕೀರಗೌಡ ದ್ಯಾಮನಗೌಡ್ರ, ಬಸವರಾಜ ಹೊನ್ನಪ್ಪ ಹೊಸಮನಿ, ಅಮೃತಗೌಡ ಮಾಜಿಗೌಡ್ರ, ಶೇಖರಗೌಡ ಗುರನಗೌಡ ದ್ಯಾಮನಗೌಡ್ರ ಮತ್ತು ಬಲವಂತಪ್ಪ ಉಡಚಪ್ಪ ಬಸವನಾಯಕ. ಓಮಿನಿ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಕಾರನ್ನು ನನ್ನ ಮಗ ಅಜ್ಜಪ್ಪ ಚಾಲನೆ ಮಾಡುತ್ತಿದ್ದನು.

ಆ ದಿನ ನಾವು ಮಾತುಕತೆಗೆ ವಾಸುದೇವಗೌಡನ ಮನಗೆ ಹೋಗಿದ್ದೆವು. ಅಲ್ಲಿ 3-4 ಜನ ಹಿರೇಬೂದಿಹಾಳ ಗ್ರಾಮದವರು ಇದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಮಾತುಕತೆಗೆ ಕುಂತಾಗ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಜಮೀನು ಮಾರಾಟ ಮಾಡುವ ಖರೀದಿ ರಖಂ ಹೇಳಿದರು. ಅವರು ನನ್ನ ಮತ್ತು ಸಾಕ್ಷಿದಾರರ ಸಮಕ್ಷಮ ರೂ. 2 ಲಕ್ಷಕ್ಕೆ 1 ಎಕರೆ ಜಮೀನು ಮಾರಾಟ ಮಾಡುತ್ತೇವೆ ಎಂದು ಹೇಳಿದ್ದರು. ಆಗ ನಾನು ರೂ. 1 ಲಕ್ಷ ಒಳಗೆ 1 ಎಕರೆ ಜಮೀನು ಖರೀದಿಸುವುದಾಗಿ ತಿಳಿಸಿದೆನು. ನಂತರ ಅವರು ಸಾಕ್ಷಿದಾರರ ಸಮಕ್ಷಮ ರೂ. 1,70,000/- ತಲಾ ಎಕರೆ ಎಂದು ಹೇಳಿದ್ದು ನಾನು ರೂ. 1,10,000/- ತಲಾ ಎಕರೆ ಎಂದು ಹೇಳಿದ್ದೆನು. ನಂತರ ಅವರು ರೂ. 1,50,000/- ತಲಾ

ಎಕರೆವರೆಗೂ ಬಂದಿದ್ದು ನಾನು ರೂ. 1,15,000/- ತಲಾ ಎಕರೆಗೆ ಬಂದಿದ್ದು ಆನಂತರ ಸರಿ ಹೋಗದಿರುವ ಕಾರಣ ಹೊರಟು ನಿಂತೆವು. ನಾವು ಹೊರಟಿದ್ದಾಗ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಪರವಾಗಿ ಇದ್ದ ಮೂರು ಜನ ಸಾಕ್ಷಿದಾರರು ನಮ್ಮನ್ನು ಕರೆದರು. ನಂತರ ಎಲ್ಲಾ ಮಾತುಕತೆ ಆಗಿದ್ದು ಕೊನೆಗೆ ರೂ. 1,31,501/- ಗೆ 1 ಎಕರೆ ಜಮೀನು ಎಂದು ನಿರ್ಧಾರ ಆಯಿತು. ಸದರಿ ನಿರ್ಧಾರಿತ ಹಣವನ್ನು ಹಿರೇಬೂದಿಹಾಳ ಗ್ರಾಮದವರು ಹೇಳಿದರು ಆದರೆ ಬಹಳ ದಿನ ಕಳೆದಿರುವುದರಿಂದ ನನಗೆ ಅವರ ಹೆಸರು ನೆನಪಿಲ್ಲ. ಅವರು ತಮ್ಮ ಹೆಸರು ಹೇಳಿದ್ದರು ಆದರೆ ಈಗ ನನಗೆ ಅವರ ಹೆಸರು ನೆನಪಿಲ್ಲ. ಅವರು ಹೆಸರು ಹೇಳಿರುವುದನ್ನು ಬೇರೆಯವರು ಎಂದರೆ ನನ್ನ ಪರವಾಗಿ ಇದ್ದ ಸಾಕ್ಷಿದಾರರು ಕೇಳಿದ್ದರು ಆದರೆ ಅವರಿಗೆ ಅವರ ಹೆಸರು ನೆನಪು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಖರೀದಿ ವ್ಯವಹಾರದ ಮಾತುಕತೆ ಮದ್ಯಾಹ್ನ 2.30-3.00 ಗಂಟೆಗೆ ಮುಗಿದಿತ್ತು.

ಖರೀದಿ ವ್ಯವಹಾರದ ಮಾತುಕತೆ ಮುಗಿದ ತಕ್ಷಣ ನಾನು ರೂ. 10,000/- ಸಂಚಕಾರ ಹಣ ಕೊಟ್ಟಿದ್ದೆನು. ನಾನು ಸದರಿ ಸಂಚಕಾರ ಹಣವನ್ನು ಹಿರೇಬೂದಿಹಾಳ ಗ್ರಾಮದ ಹಿರಿಯರಾದ ಒಬ್ಬರಿಗೆ ಕೊಟ್ಟಿದ್ದು ಅವರು ಸದರಿ ಹಣವನ್ನು ವಾಸುದೇವಗೌಡ್ರರಿಗೆ ಕೊಟ್ಟಿದ್ದರು. ನಾನು ಹಣ ಕೊಡುವುದನ್ನು ನನ್ನ ಪರವಾಗಿ

ಇದ್ದಂತಹ ಸಾಕ್ಷಿದಾರರು ನೋಡಿರುತ್ತಾರೆ. ಸದರಿ ರೂ. 10,000/- ರೂಪಾಯಿ 100 ರ ಮುಖಬೆಲೆಯ ನೋಟಿನ ಕಟ್ಟು ಇತ್ತು. ಆ ದಿನ ಯಾವುದೇ ದಾಖಲೆ ಆಗಲಿಲ್ಲ. ಸದರಿ ರೂ. 10,000/-ಸಂಚಕಾರ ಹಣ ಕೊಟ್ಟಿದ್ದಕ್ಕೆ ಕಾಗದ ಬರೆಸಿಕೊಡಿ ಎಂದು ಪಂಚರನ್ನು ಕೇಳಿದಿರಾ ಎಂಬ ಪ್ರಶ್ನೆಗೆ ಸಾಕ್ಷಿಯ ವಿಶ್ವಾಸ ಇದ್ದಿದ್ದರಿಂದ ಹಾಗೂ ನಾಲ್ಕು ದಿನದ ನಂತರ ಖರೀದಿ ಕರಾರುಪತ್ರ ಬರೆಸಿಕೊಳ್ಳಬೇಕಾಗಿದ್ದರಿಂದ ಕೇಳಲಿಲ್ಲ. ನಾನು ಖರೀದಿ ಕರಾರುಪತ್ರದ ಬಗ್ಗೆ ಕೇಳಲಾಗಿ ನಾಲ್ಕು ದಿನದ ನಂತರ ಸವಣೂರ ಉಪನೊಂದಣಾಧಿಕಾರಿ ಕಚೇರಿಗೆ ಬಂದು ಖರೀದಿ ಕರಾರುಪತ್ರ ಬರೆದುಕೊಡುತ್ತೇವೆ ಎಂದು ಹೇಳಿದ್ದರಿಂದ ನಾನು ವಿಶ್ವಾಸದ ಮೇಲೆ ರೂ. 10,000/-ಸಂಚಕಾರ ಹಣ ಕೊಟ್ಟಿರುತ್ತೇನೆ.

ಮಾತುಕತೆ ದಿನದಂದು ನಾನು ಯಾವುದೇ ದಾಖಲೆ ತೆಗೆದುಕೊಂಡು ಹೋಗಿರಲಿಲ್ಲ ಆದರೆ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ದಾವಾ ಆಸ್ತಿಯ ಉತಾರ ತಂದಿದ್ದರು. ಸದರಿ ಉತಾರವನ್ನು ನಾನು ಹಾಗೂ ನನ್ನ ಜೊತೆ ಹೋದಂತಹ ಪಂಚರು ನೋಡಿದ್ದೆವು. ಸದರಿ ಉತಾರದಲ್ಲಿ ಮನ್ನಂಗಿ ಹಾಗೂ ಕುಣಿಮೇಳಿಹಳ್ಳಿ ವ್ಯವಸಾಯ ಸೇವಾ ಸಂಘದ ಬೋಜಾ ಇತ್ತು ಎಂದರೆ ಸರಿ. ನಾನು ದಾವಾ ಆಸ್ತಿಯ ಉತಾರ ಮೊದಲು ನೋಡಿ ಆನಂತರ ಖರೀದಿ ವ್ಯವಹಾರದ ಮಾತುಕತೆ ಮಾಡಿದ್ದೆನು. ವ್ಯವಹಾರ ಮಾತನಾಡುವಾಗ ನಾನು ಮನ್ನಂಗಿ ಹಾಗೂ ಕುಣಿಮೇಳಿಹಳ್ಳಿ ವ್ಯವಸಾಯ

ಸೇವಾ ಸಂಘದ ಸಾಲ ಎಷ್ಟು ಇದೆ ಎಂದು ಕೇಳಿದ್ದೆ ಅದಕ್ಕೆ ಅವರು ರೂ. 27,000/- ಇದೆ ಎಂದು ತಿಳಿಸಿದ್ದರು. ಮನ್ನಂಗಿ, ಕುಣಿಮೇಳಿಹಳ್ಳಿ ಹಾಗೂ ಮೆಳ್ಳಾಗಟ್ಟಿ ಕೂಡಿಕೊಂಡು ಒಂದೇ ವ್ಯವಸಾಯ ಸೇವಾ ಸಂಘ ಇದೆ. ಸದರಿ ಸಾಲ ಯಾರು ಕಟ್ಟಬೇಕು ಎಂದು ನಾನು ಕೇಳಿದ್ದೆ ಅದಕ್ಕೆ ವಾಸುದೇವಗೌಡ ಅವರೇ ಕಟ್ಟಿಕೊಳ್ಳುತ್ತೇವೆ ಎಂದು ಹೇಳಿದ್ದರು. ಖರೀದಿ ಕರಾರುಪತ್ರ ಬರೆದುಕೊಡುವ ಸಮಯಕ್ಕೆ ಸಾಲ ಕಟ್ಟಿ ಬೋಜಾ ಕಡಿಮೆ ಮಾಡಿಸುತ್ತೇವೆ ಎಂದು ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಹೇಳಿದ್ದರು.

ವ್ಯವಹಾರ ಮಾತುಕತೆ ಆದ ದಿನದಂದು ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಶುಕ್ರವಾರದಂದು ಖರೀದಿ ಕರಾರುಪತ್ರ ಬರೆದುಕೊಡಲು ಸವಣೂರಿಗೆ ಬರುತ್ತೇವೆ ಎಂದು ಹೇಳಿದ್ದರು. ಶುಕ್ರವಾರದಂದು ದಿಃ 22.01.2010 ಇತ್ತು. ದಿಃ 22.01.2010 ರಂದು ನಾನು ಮತ್ತು ಮೇಲೆ ಹೇಳಿದ ಎಂಟು ಜನರು ಕೂಡಿಕೊಂಡು ಸವಣೂರ ಉಪನೊಂದಣಾಧಿಕಾರಿ ಕಚೇರಿ ಹತ್ತಿರ ಮೊದಲು ಹೋಗಿದ್ದು ಆನಂತರ ವಾಸುದೇಗೌಡ, 5 ನೇ ಪ್ರತಿವಾದಿ ಹಾಗೂ ಅವರ ಪರ ಮೇಲೆ ಹೇಳಿದ ಮೂರು ಜನ ಸಾಕ್ಷಿದಾರರು ಬಂದಿದ್ದರು. ನಾವೆಲ್ಲರೂ ಕೂಡಿದಾಗ ಮಧ್ಯಾಹ್ನ ಸುಮಾರು 12 ಗಂಟೆ ಆಗಿತ್ತು.

ಆ ದಿನ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ದಾವಾ ಜಮೀನಿನ ಉತಾರ ತಂದಿದ್ದರು. ನಂತರ ನಾನು ಮುದ್ರಾಂಕ ಶುಲ್ಕವಾದ ರೂ. 1,770/- ವಾಸುದೇವಗೌಡರ ಕೈಗೆ ಕೊಟ್ಟಿದ್ದು ಅವರು ಮತ್ತು ನನ್ನ ಮಗ ಅಜ್ಜಪ್ಪ ಕೂಡಿಕೊಂಡು ಹೋಗಿ ಖಜಾನೆಗೆ ಆ ಹಣ ಕಟ್ಟಿದ್ದರು. ಆ ಹಣವನ್ನು ನನ್ನ ಹೆಸರಿಗೆ ಕಟ್ಟಿದ್ದರು. ಹಣ ಕಟ್ಟಲು ಚಲನಗೆ ನನ್ನ ಸಹಿ ಪಡೆಯಲಿಲ್ಲ. ಸಂಚಕಾರ ಪತ್ರ ಬರೆಯಲು ಎಷ್ಟು ಶೀಟ್ ಛಾಪಾ ಕಾಗದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಕೂಡಿಕೊಂಡು ಛಾಪಾಕಾಗದ ತಂದು ಖರೀದಿ ಕರಾರುಪತ್ರ ಟೈಪ್ ಮಾಡಿಸಲು ಅದನ್ನು ಸಪಗಾಯಿ ಎಂಬ ಪತ್ರ ಬರಹಗಾರರಿಗೆ ಕೊಟ್ಟರು. ನಂತರ ಖರೀದಿ ಕರಾರುಪತ್ರ ಬರೆಯಲು ಮಾತುಕತೆಯ ಎಲ್ಲಾ ಮಾಹಿತಿಯನ್ನು ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಪತ್ರ ಬರಹಗಾರರಿಗೆ ಕೊಟ್ಟಿದ್ದರು. ಖರೀದಿ ಕರಾರುಪತ್ರ ಟೈಪ್ ಮಾಡಿಸುವಾಗ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿ ಬೇರೆ ಕಡೆ ವಾಸವಿರುವುದರಿಂದ ಅವರಿಗೆ ದಾವಾ ಜಮೀನು ಉಪಯುಕ್ತ ಆಗುತ್ತಿಲ್ಲ ಎಂದು ಮಾಹಿತಿ ಕೊಟ್ಟಿದ್ದೆವು. ಇಷ್ಟು ಮಾಹಿತಿ ಹೊರತುಪಡಿಸಿ ಬೇರೆ ಮಾಹಿತಿ ಕೊಟ್ಟಿರುವುದಿಲ್ಲ.

ಈ ಹಂತದಲ್ಲಿ ಪ್ರತಿವಾದಿ 1, 2 ಮತ್ತು 4 ರವರ ಪರ ಶ್ರೀ ವಿ ಕೆ ಕೆ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)